ಮೌಲ್ಯ ರಕ್ಷಕನಾದ, ಕರುಣಾರ್ದ್ರ ಹೃದಯನಾದ, ಪ್ರೇಮ ಸ್ವರೂಪದ ದೇವರು. ಇದು ಅವರ ವಾದ. ಅವರ ಗೆಳೆಯರು, ಪರಿಚಿತರು ಮತ್ತು ನೆಂಟರಿಷ್ಟರಿಗೆ ಆಘಾತ ಉಂಟು ಮಾಡಿದ ವಿಚಾರಗಳು ಅವು. ಈ ಮನುಷ್ಯ ದೇವರ ಕೋಪವನ್ನು ವಿನಾಕಾರಣ ಕೆರಳಿಸುತ್ತಿದ್ದಾನಲ್ಲ ಎಂದು ಚಡಪಡಿಸಿದರು. ಅವರ ವಿಚಾರಗಳನ್ನು ಅರಗಿಸಿಕೊಳ್ಳಲಾಗದ ಚಡಪಡಿಕೆ ಅದು. ಅದಕ್ಕಿಂತ ಹೆಚ್ಚು ಉಗ್ರವಾದ ಪ್ರತಿಕ್ರಿಯೆ ತೋರಿಸಲಾಗದಿದ್ದರೂ ಅವರನ್ನು ಅನೇಕರು ಆಕ್ಷೇಪಿಸುತ್ತಿದ್ದುದು ಹೌದು. ಆದರೆ ಮೂರ್ತಿರಾಯರು ಎಂದಿನಂತೆ ತಮ್ಮ ನಯ ವಿನಯಗಳಿಂದಲೇ ಅಂಥ ಪ್ರತಿಕ್ರಿಯೆಗಳನ್ನು ತಣ್ಣಗಾಗಿಸುತ್ತಿದ್ದರು.

ಅಕ್ಕಿ ಹೆಬ್ಬಾಳು ನರಸಿಂಹಮೂರ್ತಿ ರಾಯರು(ಎ.ಎನ್. ಮೂರ್ತಿರಾವ್) ಹುಟ್ಟಿದ್ದು ಅಕ್ಕಿಹೆಬ್ಬಾಳು ಎಂಬ ನದೀ ತೀರದ ಪ್ರಶಾಂತ ಗ್ರಾಮದಲ್ಲಿ. ಚಿಕ್ಕಂದಿನಲ್ಲಿ ಹೊಳೆಯಲ್ಲಿ ಈಜಾಟ ಮತ್ತು ತಿರುಗಾಟದ ಜೊತೆಗೆ ಆ ಊರಿನ ಶಾಲೆಯಲ್ಲಿ ಕಲಿತರು. ಮುಂದೆ ಹೈಸ್ಕೂಲು, ಕಾಲೇಜು ಅಭ್ಯಾಸ ಮೈಸೂರಿನಲ್ಲಿ.

ಮೂರ್ತಿರಾಯರು, ಎಂದೂ ಪಾಂಡಿತ್ಯದ ತಲೆನೋವಿನಿಂದ ನರಳಿದವರಲ್ಲ! ದೇವರ ನಂಬಿಕೆಯಂಥ ಗಂಭೀರ ವಿಷಯವನ್ನು, ಕೇಳಿಸಿಕೊಳ್ಳುವ ಆಸ್ತಿಕರಿಗೆ ಒಂದಿಷ್ಟೂ ಬೇಸರವಾಗದ ಶೈಲಿಯಲ್ಲಿ ಹೇಳುವವರು. ನಾನು ನಾಸ್ತಿಕನಾದರೆ ನಿಮ್ಮದೇನು ಗಂಟು ಹೋಯಿತು ಎಂದು ನಯವಾಗಿ ಉತ್ತರ ಕೊಡುವವರು.

ಮೈಸೂರು ವಿಶ್ವವಿದ್ಯಾಲಯಯಲ್ಲಿ(ಮಹಾರಾಜ ಕಾಲೇಜು) ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಅದಕ್ಕೂ ಮೊದಲು ಶಿವಮೊಗ್ಗದ ಇಂಟರ್‌ಮೀಡಿಯೇಟ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು ಹಾಗೂ ಬೇರೆ ಬೇರೆ ಕಾಲೇಜುಗಳಲ್ಲಿ ಕೆಲಸ ಮಾಡಿದ್ದರು. ಅವರು ವಿದ್ಯಾರ್ಥಿ ಸ್ನೇಹಿ ಮೇಷ್ಟರು ಎಂದು ವಿದ್ಯಾರ್ಥಿಗಳ ಅಭಿಮಾನಕ್ಕೆ ಪಾತ್ರರಾಗಿದ್ದರು. ನಿವೃತ್ತಿಯ ನಂತರ ಕೆಲವು ವಿದೇಶೀ ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಗಳನ್ನು ನೀಡಿದರು.

ಲಲಿತ ಪ್ರಬಂಧಗಳು, ವ್ಯಕ್ತಿಚಿತ್ರ, ಪ್ರವಾಸ ಕಥನ, ಆತ್ಮಕಥನ, ವಿಮರ್ಶೆ, ನಾಟಕ, ವೈಚಾರಿಕ ಹೀಗೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ಪ್ರಕಟಿಸಿದ್ದಾರೆ. ಇಂಗ್ಲಿಷ್‌ನಿಂದ ಕೆಲವು ಕೃತಿಗಳನ್ನು ರೂಪಾಂತರಿಸಿದ್ದಾರೆ ಮತ್ತು ಅನುವಾದಿಸಿದ್ದಾರೆ. ವ್ಯಾಲೆಂಟೈನ್ ಎಂಬಾತನ 'ಕೋರಲ್ ಐಲ್ಯಾಂಡ್' ಕೃತಿಯನ್ನು, ಕನ್ನಡದಲ್ಲಿ 'ಹವಳದ್ವೀಪ' ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿ ಪ್ರಕಟಿಸಿದ್ದರು.

ನಿವೃತ್ತಿಯ ನಂತರ ಮೂರ್ತಿರಾಯರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮತ್ತು ಅನಂತರ ಅದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಪ್ರಾರಂಭಿಸಿದಾಗ ಮೂರ್ತಿರಾಯರ ಶಿಷ್ಯರೂ ಕರ್ನಟಕದ ಮುಖ್ಯಮಂತ್ರಿಯೂ ಆಗಿದ್ದ ಕೆಂಗಲ್ ಹನುಮಂತಯ್ಯನವರು, ಇಲಾಖೆಯ ಮೊದಲ ನಿರ್ದೇಶಕರಾಗಿ ಮೂರ್ತಿರಾಯರನ್ನು ನೇಮಿಸಿದರು. ಇಲಾಖೆಯ ನಿರ್ದೇಶಕರಾಗಿ ಅವರು, ಕುಮಾರವ್ಯಾಸ ಭಾರತ ಮತ್ತು ಹರಿಶ್ಚಂದ್ರ ಕಾವ್ಯಗಳಂಥ ಉತ್ತಮ, ಜನಪ್ರಿಯ ಸಾಹಿತ್ಯ ಕೃತಿಗಳನ್ನು ಮುದ್ರಿಸಿ ಸುಲಭ ಬೆಲೆಗೆ ದೊರಕುವಂತೆ ಮಾಡಿದರು.

ಇವರ 'ಚಿತ್ರಗಳು ಪತ್ರಗಳು' ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಗಳಿಸಿತು. 1994ರಲ್ಲಿ ಕರ್ನಾಟಕ ಸರಕಾರ ಅವರಿಗೆ ಪಂಪ ಪ್ರಶಸ್ತಿ ನೀಡಿ ಗೌರವಿಸಿತು. ಆ ಸಂದರ್ಭದಲ್ಲಿ ನಡೆದ ಅಭಿನಂದನ ಸಮಾರಂಭದಲ್ಲಿ ಅನೇಕರು ಅವರನ್ನು ಶ್ಲಾಘಿಸಿ ಮಾತನಾಡಿದರು. ಅವರ ಶಿಷ್ಯೆ